**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ.,**
**ನ್ಯಾಯಾಲಯ, ಹೊಸದುರ್ಗ.**

**ಅಸಲು ದಾವಾ ಸಂಖ್ಯೆ: 231/2017** **ದಿನಾಂಕ: 12-03-2025**

**ಪಿ.ಡಬ್ಲ್ಯೂ: 2**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು :  2 ಮತ್ತು 3 ನೇ ಪ್ರತಿವಾದಿಯ ಪರ ಶ್ರೀ ಆರ್.ಕೆ. ವಕೀಲರಿಂದ**

1. ನಾನು ಈ ದಾವೆಯಲ್ಲಿ 2 ನೇ ಬಾರಿಗೆ ಸಾಕ್ಷ್ಯ ನುಡಿಯಲು ಬಂದಿರುತ್ತೇನೆ. ನಾನು ಈ ದಾವೆಯಲ್ಲಿ ಹೊರತುಪಡಿಸಿ ಬೇರೆ ಪ್ರಕರಣಗಳಲ್ಲಿ ಸಾಕ್ಷ್ಯ ನುಡಿದಿರುವುದಿಲ್ಲ. ನಾನು ಕಪ್ಪಗೆರೆ ಗ್ರಾಮದವನಾಗಿದ್ದು, ವ್ಯವಸಾಯ ಮಾಡುತ್ತೇನೆ. ವಾದಿ ನನ್ನ ಸೋದರ ಸಂಬಂಧಿ. 1 ನೇ ಪ್ರತಿವಾದಿಯ ಪರಿಚಯ ಇರುತ್ತದೆ. ಆತನ ಹೆಂಡತಿಯ ಹೆಸರು ಸಾಕಮ್ಮ. ಅವರಿಗೆ 3 ಜನ ಹೆಣ್ಣು ಮಕ್ಕಳು, ಅವರು ಮಂಜುಳಾ, ಮಮತಾ ಮತ್ತು ಯಶೋಧ ಹಾಗೂ ಒಬ್ಬ ಗಂಡು ಮಗ ಇದ್ದು, ಆತನ ಹೆಸರು ನಟರಾಜ, ಈಗ ಅವರು ಮರಣ ಹೊಂದಿರುತ್ತಾರೆ.

2. ವಾದಿ ಪರಮೇಶ್ವರಪ್ಪರವರಿಗೆ ಇಬ್ಬರು ಗಂಡು ಮಕ್ಕಳು, ಒಬ್ಬಾಕೆ ಹೆಣ್ಣು ಮಗಳು. ನಾನು ಮತ್ತು ಪಿ.ಡಬ್ಲ್ಯೂ:3 ನ್ಯಾಯಾಲಯಕ್ಕೆ ಒಟ್ಟಿಗೆ ಬಂದಿರುತ್ತೇವೆ. ನೆನ್ನೆಯ ದಿನ ಈ ದಾವೆಯ ವಿಚಾರಣೆ ಇರುವ ಬಗ್ಗೆ ತಿಳಿಸಿದ್ದರು.  ನಾನು, ವಾದಿ ಮತ್ತು ಪಿ.ಡಬ್ಲ್ಯೂ:3 ದಾವೆಯ ಬಗ್ಗೆ ಚರ್ಚೆ ಮಾಡಿರುವುದಿಲ್ಲ. ಈ ದಾವೆಯನ್ನು ಹೂಡಿರುವ ಬಗ್ಗೆ ವಾದಿ ತಿಳಿಸಿರುತ್ತಾರೆ. ದಾವೆಯಲ್ಲಿ ಬರೆಸಿರುವ ವಿಷಯಗಳನ್ನು ವಾದಿ ನನಗೆ ತಿಳಿಸಿರುತ್ತಾರೆ. ಅವುಗಳ ಬಗ್ಗೆ ತಿಳಿದುಕೊಂಡು ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರ ಸಲ್ಲಿಸಿರುತ್ತೇನೆ. 1 ನೇ ಪ್ರತಿವಾದಿ ಈಶ್ವರಪ್ಪನವರ ತಂದೆಯ ಹೆಸರು ಭೈರಪ್ಪ.  ಭೈರಪ್ಪರವರಿಗೆ ಈಶ್ವರಪ್ಪ ಮತ್ತು ಕಲ್ಲೇಶಪ್ಪ ಎಂಬ ಇಬ್ಬರು ಮಕ್ಕಳು. ಹೆಣ್ಣು ಮಕ್ಕಳು ಇರುವುದಿಲ್ಲ.

3. 1 ನೇ ಪ್ರತಿವಾದಿ ಈಶ್ವರಪ್ಪನವರ ನೌಕರಿಗೆ ಸೇರಿದಾಗ ನಾನು 5-6 ನೇ ತರಗತಿಯಲ್ಲಿ ಓದುತ್ತಿದ್ದೆನು, ಅಂದಾಜು ಇಸವಿ 1974-75 ಇರಬಹುದು. 1 ನೇ ಪ್ರತಿವಾದಿ ಈಶ್ವರಪ್ಪನವರ ಚಳ್ಳಕೆರೆ, ಮತ್ತೋಡು, ರಾಂಪುರ, ಹೊಸದುರ್ಗ, ಮೊಳಕಾಲ್ಮೂರು ಸ್ಥಳಗಳಲ್ಲಿ ನೌಕರಿ ಮಾಡಿರುತ್ತಾರೆ. ಬೇರೆ ಸ್ಥಳಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ಭೈರಪ್ಪರವರ ಕುಟುಂಬದಲ್ಲಿ ವಾದಿ, 1 ನೇ ಪ್ರತಿವಾದಿ, ಆತನ ಹೆಂಡತಿ ಸಾಕಮ್ಮ ಹಾಗೂ ಕಲ್ಲೇಶಪ್ಪ ಇದ್ದು, ಕಲ್ಲೇಶಪ್ಪ ನಂತರ ಮರಣ ಹೊಂದಿರುತ್ತಾರೆ. ಹೆಚ್ಚುವರಿ ಕುಟುಂಬ ಸದಸ್ಯರು ಇರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಮುಂದುವರೆದು ಅವರ ಕುಟುಂಬದಲ್ಲಿ ಕಲ್ಲೇಶಪ್ಪನ ಹೆಂಡತಿ ಹೊಳಿಯಮ್ಮ ಮತ್ತು ಆತನ ಇಬ್ಬರು ಮಕ್ಕಳು ಅಂದರೆ ವಾದಿ ಮತ್ತು ಪಾರ್ವತಮ್ಮ, ಭೈರಪ್ಪನ ಹೆಂಡತಿ ಹನುಮವ್ವ ಇದ್ದರು ಎಂದರೆ ಸರಿ. ಅವರ ಪೈಕಿ ಹನುಮವ್ವ ಮತ್ತು ಹೊಳಿಯಮ್ಮರವರ ತವರುಮನೆ ಶ್ರೀರಾಂಪುರ ಹೋಬಳಿಯ ಮಾಳಪ್ಪನಹಳ್ಳಿ. ಅವರಿಗೆ ಒಟ್ಟು ಸುಮಾರು 50 ಎಕರೆ ಆಸ್ತಿ ಇತ್ತು. ಅವರ ಮನೆಯಲ್ಲಿ ಸಂಬಳಕ್ಕೆ ಒಬ್ಬರು ಇದ್ದು, ಕೂಲಿ ಆಳುಗಳು ಕೆಲಸ ಇದ್ದಾಗ ಬರುತ್ತಿದ್ದರು.

4. ಹೊಳಿಯಮ್ಮರವರ ಅಕ್ಕನ ಮಗ ಕರಿಯಪ್ಪ ಸಹ ಅವರ ಕುಟುಂಬದಲ್ಲಿ ದುಡಿಯುತ್ತಿದ್ದರು ಎಂದರೆ ಸರಿಯಲ್ಲ. ಹನುಮವ್ವನ ತಂಗಿಯ ಗಂಡ ಕರಿಯಪ್ಪ. ಅವರು ತಮ್ಮ ಊರು ತೊರೆದು ಭೈರಪ್ಪನ ಕುಟುಂಬದಲ್ಲಿ ದುಡಿಯುತ್ತಿದ್ದರು ಎಂದರೆ ಸರಿ. ಕಲ್ಲೇಶಪ್ಪನ ಮರಣಾನಂತರ ವಾದಿ ಮತ್ತು ಆತನ ಸಹೋದರಿ ಪಾರ್ವತಮ್ಮನನ್ನು 1 ನೇ ಪ್ರತಿವಾದಿ ಓದಿಸಿ ಬೆಳೆಸಿರುತ್ತಾರೆ. ಅವರಿಬ್ಬರ ವಿವಾಹ 1 ನೇ ಪ್ರತಿವಾದಿ ಮಾಡಿರುತ್ತಾರೆ. ನಾನು ಹುಟ್ಟಿದಾಗಿನಿಂದ ವಾದಿಯೊಂದಿಗೆ ಒಡನಾಟ ಹೊಂದಿರುತ್ತೇನೆ. ಅದೇ ರೀತಿ ಪಿ.ಡಬ್ಲ್ಯೂ:3 ಸಹ ವಾದಿಯೊಂದಿಗೆ ಉತ್ತಮ ಒಡನಾಟ ಹೊಂದಿರುತ್ತಾರೆ. ಸದರಿರವರ ಒಡನಾಡಿಯಾಗಿ ವಾದಿಯ ಪರವಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ. 1 ನೇ ಪ್ರತಿವಾದಿ ಮನೆಯ ವಹಿವಾಟು ಹಾಗೂ ಜಮೀನಿನ ವಹಿವಾಟು

ಕೂಲಿಗಳ ಸಂಬಳ, ವಯಸ್ಕರಾದ ತಂದೆ-ತಾಯಿಯರ ಆರೈಕೆ ಹಾಗೂ ವಾದಿಯ ವಿದ್ಯಾಭ್ಯಾಸ ನೋಡಿಕೊಂಡಿರುತ್ತಾರೆ ಎಂದರೆ ಸರಿ. ವಾದಿಯ ವಿವಾಹ ಆಗುವವರೆಗೂ 1 ನೇ ಪ್ರತಿವಾದಿ ಈ ರೀತಿ ಎಲ್ಲಾ ಸೌಕರ್ಯಗಳನ್ನು ನೋಡಿಕೊಂಡಿರುತ್ತಾರೆ ಎಂದರೆ ಸರಿ.

5. ವಾದಿಯ ಅಕ್ಕ ಪಾರ್ವತಮ್ಮನವರನ್ನು ಮಾಳಪ್ಪನಹಳ್ಳಿ ಗ್ರಾಮಕ್ಕೆ ಕೊಟ್ಟು ವಿವಾಹ ಮಾಡಿರುತ್ತಾರೆ. ವಾದಿಯ ವಿವಾಹದ ನಂತರ 1 ನೇ ಪ್ರತಿವಾದಿ ಕೂಲಿ ಆಳುಗಳನ್ನು ನೋಡಿಕೊಂಡು ವಾದಿಯ ಜೊತೆ ಇಟ್ಟುಕೊಂಡು ನೋಡಿಕೊಳ್ಳುತ್ತಿದ್ದನು. 50 ಎಕರೆ ಜಮೀನನ್ನು ಒಬ್ಬರೇ ವ್ಯಕ್ತಿ ನೋಡಿಕೊಳ್ಳಲು ಆಗುವುದಿಲ್ಲ. 4 ಜೋಡಿ ಎತ್ತುಗಳಿಂದ ಉಳುಮೆ ಮಾಡಬೇಕು ಎಂದರೆ ಸರಿ. ದಾವಾ ಅನುಸೂಚಿಯ ಸ್ವತ್ತುಗಳನ್ನು ನೋಡಿಕೊಳ್ಳುವವರು ಯಾರು ಇಲ್ಲದ ಕಾರಣ ಮತ್ತು ಕಪ್ಪಗೆರೆ ಗ್ರಾಮದಲ್ಲಿ ವ್ಯವಸಾಯ ಕೆಲಸ ಮಾಡಿಸುವವರು ಇಲ್ಲದೇ ಇದ್ದಕಾರಣ 1 ನೇ ಪ್ರತಿವಾದಿ ವಾದಿಯ ವಿದ್ಯಾಭ್ಯಾಸವನ್ನು ತಡೆದು ಆತನನ್ನು ಕಪ್ಪಗೆರೆ ಗ್ರಾಮಕ್ಕೆ ಜಮೀನುಗಳನ್ನು ನೋಡಿಕೊಳ್ಳಲು ವಾಪಸ್ಸು ಕಳುಹಿಸಿರುತ್ತಾರೆ ಎಂದು ನಾನು ಬರೆಸಿರುವುದು ಸುಳ್ಳು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ವಾದಿಯನ್ನು ಹೊಸದುರ್ಗಕ್ಕೆ ಕರೆದುಕೊಂಡು ಬಂದು ಪ್ರೌಢಶಾಲೆಗೆ ಸೇರಿಸಿರುತ್ತಾರೆ ಎಂದರೆ ಸರಿ. ಅಲ್ಲಿ ವಾದಿ ಕೆಟ್ಟ ಸಹವಾಸ ಮಾಡಿ ವಿದ್ಯಾಭ್ಯಾಸ ನಿಲ್ಲಿಸಿ ವಾಪಸ್ಸು ಊರಿಗೆ ಹೋಗಿರುತ್ತಾನೆ ಎಂದರೆ ಸರಿಯಲ್ಲ. ಆ ರೀತಿ ವಿದ್ಯಾಭ್ಯಾಸ ಮೊಟಕುಗೊಳಿಸಿ ವಾದಿ ಊರಿಗೆ ಹೋಗಿದ್ದರು ಹೋಗಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎಸ್.ಎಸ್.ಎಲ್.ಸಿ ಪಾಸಾದರು ಮುಂದಕ್ಕೆ ಓದಿಸಲಾಗದೇ ಊರಿಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ವಾದಿಯನ್ನು ಓದಿಸಲಾಗದೇ ಊರಿಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. 1 ನೇ ಪ್ರತಿವಾದಿ ಹೊಸದುರ್ಗದಲ್ಲಿ ನಿವೃತ್ತಿಯಾಗಿದ್ದು, ಯಾವ ಇಸವಿಯಲ್ಲಿ ಆಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಹೊಸದುರ್ಗದಲ್ಲಿ ಕೆಲಸ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಹೊಸದುರ್ಗದಲ್ಲಿ ಕೆಲಸ ಮಾಡಿ ನಿವೃತ್ತಿ ಹೊಂದಿದ ಬಗ್ಗೆ ನಾನು ದಾಖಲೆಯನ್ನು ನೋಡಿರುವುದಿಲ್ಲ. ನಮ್ಮ ಊರಿನಲ್ಲಿ ಸುಮಾರು 300-350 ಮನೆಗಳು ಇರುತ್ತವೆ. ನಮ್ಮ ಗ್ರಾಮದಲ್ಲಿ ಯಾರು ಯಾರು ನೌಕರಿ ಮಾಡಿ ಯಾವಾಗ ನಿವೃತ್ತಿ ಆಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

7. 1 ನೇ ಪ್ರತಿವಾದಿ ಭಾಗ ಮಾಡಿರುವುದಾಗಿ ಸುಮಾರು 14-15-16 ವರ್ಷಗಳ ಹಿಂದೆ ಎಂದು ಹೇಳಿರುತ್ತಾರೆ, ಯಾವ ಇಸವಿ ಎಂದು ನನಗೆ ಗೊತ್ತಿಲ್ಲ. ನಿಖರವಾದ ದಿನಾಂಕ ಮತ್ತು ಇಸವಿ ನನಗೆ ಗೊತ್ತಿಲ್ಲ. ನಿಖರವಾಗಿ 14, 15 ಅಥವಾ 16 ವರ್ಷ ಎಂದು ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ನನ್ನನ್ನು ಕರೆಸಿರುವುದಿಲ್ಲ. ಹಿರಿಯರು ಅಂದರೆ 1 ನೇ ಪ್ರತಿವಾದಿ ಚಿಕ್ಕಪ್ಪನ ಹೆಸರು ಕಲ್ಲಪ್ಪ ತಂದೆ ಕಲ್ಲಪ್ಪ, ಬಸವರಾಜಪ್ಪ ತಂದೆ ಕರಿಯಪ್ಪ, ಹನುಮಂತಪ್ಪ ತಂದೆ ಈಶ್ವರಪ್ಪ, ಆಂಜನಪ್ಪ ತಂದೆ ಹನುಮಂತಪ್ಪ, ಭೈರಪ್ಪ ತಂದೆ ಈಶ್ವರಪ್ಪ, ಈಶ್ವರಪ್ಪ ತಂದೆ ದ್ಯಾಮಪ್ಪ ಅಂದರೆ ನನ್ನ ಅಣ್ಣ, ಉಳಿದವರ ಹೆಸರು ನನಗೆ ಹೇಳಲು ಬರುವುದಿಲ್ಲ. ಎಲ್ಲರೂ ಸಂಜೆ ಸುಮಾರು 7.30-8 ಗಂಟೆ ಸಮಯಕ್ಕೆ ಬಂದಿದ್ದೆವು. 1 ನೇ ಪ್ರತಿವಾದಿ ಊರಿನಲ್ಲೇ ಇದ್ದರು. ಬೇರೆ ಊರಿನಿಂದ ಬಂದು ಕರೆದಿರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಮೇಲೆ ಹೇಳಿದ ಹಿರಿಯರ ಸಮಕ್ಷಮ 1 ನೇ ಪ್ರತಿವಾದಿಯ ಚಿಕ್ಕಪ್ಪನಾದ ಗೌಡರ ಕಲ್ಲಪ್ಪರವರನ್ನು ಕೂರಿಸಿಕೊಂಡು ಬರೆದಿರುತ್ತಾರೆ ಎಂದು ಬರೆಸಿರುವುದಿಲ್ಲ.

8. ಛಾಪ ಕಾಗದಗಳನ್ನು 1 ನೇ ಪ್ರತಿವಾದಿ ತಂದಿದ್ದರು. ಬರವಣಿಗೆಯ ನಂತರ ಛಾಪ ಕಾಗದಕ್ಕೆ ಎಲ್ಲರೂ ಸಹಿ ಮಾಡಿರುತ್ತಾರೆ. ಛಾಪ ಕಾಗದದಲ್ಲಿ

ಸರ್ವೆ ನಂಬರ್, ವಿಸ್ತೀರ್ಣ, ಚಕ್ಕುಬಂದಿ ಮತ್ತು ಗ್ರಾಮದ ಹೆಸರು ಬರೆದು ಯಾವ ಜಮೀನು ಯಾರಿಗೆ ಸೇರಿರುತ್ತದೆ ಎಂದು ಬರೆದು ಎಲ್ಲರೂ ಸಹಿ ಮಾಡಿರುತ್ತಾರೆ. ಸದರಿ ದಾಖಲೆಯಲ್ಲಿ ವಾದಿಗೆ ಮತ್ತು 1 ನೇ ಪ್ರತಿವಾದಿ ಯಾವ ಗ್ರಾಮದ ಸರ್ವೆ ನಂಬರಿನ ಎಷ್ಟು ವಿಸ್ತೀರ್ಣ ಜಮೀನು ಹೋಗಿರುತ್ತದೆ ಎಂದು ನನಗೆ ಕೆಲವು ಗೊತ್ತು ಕೆಲವು ಗೊತ್ತಿಲ್ಲ. ಪುನಃ ಸಾಕ್ಷಿ ಯಾವ ನಿಖರ ಜಮೀನು ಯಾರಿಗೆ ಹೋಗಿರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

ಪ್ರಶ್ನೆಃ- ನನ್ನ ಪಾಟೀ ಸವಾಲಿನಲ್ಲಿ ಛಾಪ ಕಾಗದದ ಮೇಲೆ ಬರೆದಿರುವುದಾಗಿ ಹೇಳಿದ್ದು ಮುಖ್ಯ ವಿಚಾರಣೆಯಲ್ಲಿ ಕರಡು ಹಾಳೆಯಲ್ಲಿ ಬರೆದಿರುವುದಾಗಿ ಹೇಳಿದ್ದು ನನ್ನ ಮುಖ್ಯ ವಿಚಾರಣೆಯಲ್ಲಿ ಛಾಪ ಕಾಗದದಲ್ಲಿ ಬರೆದಿರುವುದಾಗಿ ಕಾಣಿಸಿರುವುದಿಲ್ಲ?

ಉತ್ತರಃ- ಕರಡು ಹಾಳೆಯಲ್ಲಿ ಬರೆದು ಒಂದು ವಾರದ ನಂತರ ಛಾಪಕಾಗದದ ಮೇಲೆ ಬರೆಯಲಾಗಿರುತ್ತದೆ.

**ಈ ಹಂತದಲ್ಲಿ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ.

(ಪ್ರಸನ್ನ ಕುಮಾರ್ ಸಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
**ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.**